ದಿನಾಂಕ ಃ 02-07-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಶ್ರೀ ಬಿ ಆರ್ ಎ ವಕೀಲರಿಂದಃ

ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ.

ಶಾಲೆ ಬಿಟ್ಟ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಡಿ-1 ಎಂದು, ನೇಗಿನಹಾಳ ಸರಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಯರು ಇವರಿಂದ ಎಲ್ಲಪ್ಪ ಅರ್ಜುನ ಕರಿಮುದಕಣ್ಣವರ ಮತ್ತು ಸವಿತಾ ಸುರೇಶ ಕರಿಮುದಕಣ್ಣವರ ಪಡೆದ ಪ್ರಮಾಣ ಪತ್ರಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಡಿ-2 ಮತ್ತು ನಿಡಿ-3 ಎಂದು, 2017 ಸಾಲಿನ ಮತದಾರ ಪಟ್ಟಿಯ ಧೃಡಿಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಡಿ-4 ಎಂದು, ನಿಡಿ-4 ರಲ್ಲಿ ಕ್ರಮ ಸಂಖ್ಯೆ.598 ಅರ್ಜುನ ಕರಿಮುದಕಣ್ಣವರ ಎಂದರೆ ನಾನು ಅಂತಾ ಸಾಕ್ಷಿ ಹೇಳಿದ್ದರಿಂದ ಕ್ರಮ ಸಂಖ್ಯೆ598 ನ್ನು ನಿಡಿ-4(ಎ) ಎಂದು ಗುರುತಿಸಲಾಯಿತು. ನಿಡಿ-4 ರಲ್ಲಿ ಕ್ರಮ ಸಂಖ್ಯೆ609,232,233 ಅಂದರೆ ಸಂಜೀವ ಕರಿಮುದಕನ್ನವರ, ಮಂಜುನಾಥ ಕರಿಮುದಕನ್ನವರ ಮತ್ತು ಯಲ್ಲಪ್ಪ ಕರಿಮುದಕನ್ನವರ ಈ ಮೂರು ಜನ ನನ್ನ ಗಂಡು ಮಕ್ಕಳು ಅಂತಾ ಸಾಕ್ಷಿ ಹೇಳಿದ್ದರಿಂದ ಕ್ರಮ ಸಂಖ್ಯೆ609, 232, 233 ಗಳನ್ನು ನಿಡಿ-4(ಬಿ,ಸಿ,ಡಿ) ಎಂದು ಗುರುತಿಸಲಾಯಿತು. ನಿಡಿ-4 ರಲ್ಲಿ ಕ್ರಮ ಸಂಖ್ಯೆ.599 ಪ್ರೇಮಾ ಕರಿಮುದಕನ್ನವರ ಎಂದರೆ ನನ್ನ ಹೆಂಡತಿ ಅಂತಾ ಸಾಕ್ಷಿ ಹೇಳಿದ್ದರಿಂದ ಕ್ರಮ ಸಂಖ್ಯೆ599 ನ್ನು ನಿಡಿ-4(ಇ) ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ